IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕವಲು ಕಾದಂಬರಿಯ ವಸ್ತುನಿಷ್ಠ ವಿವೇಚನೆ

NAVEEN KUMAR C

"ಆವರಣದ" ಗುಂಗಿನಿಂದ ಹೊರಬಂದು ವಿಶ್ರಮಿಸಿಕೊಳ್ಳುತ್ತಿರುವ ಹೊತ್ತಿಗೆ ಎಸ್.ಎಲ್. ಭೈರಪ್ಪನವರು ಒದಲು "ಕವಲು" ಕೊಟ್ಟಿದ್ದಾರೆ. ಕನ್ನಡ ಓದುಗರ ಸಂಖ್ಯೆ ಇಳಿಮುಖವಾಗುತ್ತಿದೆ ಎನ್ನುವ ಕೂಗುಗಳ ನಡುವೆ "ಕವಲು". ಪ್ರಕಟಣೆಗೊಂಡ ಒಂದೇ ವಾರದಲ್ಲಿ ನಾಲ್ಕನೇ ಮುದ್ರಣ ಕಾಣುತ್ತಿರುವುದು ನಿಜಕ್ಕೂ ಕನ್ನಡಿಗರಿಗೆ ಸಂತೋಷದ ಸಂಗತಿ. ಇದು ಎಸ್ ಎಲ್ ಭೈರಪ್ಪನವರ ಕೃತಿಗಳಿಗೆ ಇರುವ ಜನಪ್ರಿಯತೆಯನ್ನು ತೋರಿಸುತ್ತದೆ. "ಆವರಣ"ದಂತೆ "ಕವಲು" ಯಾವುದೇ ವಿವಾದಗಳನ್ನು ಇನ್ನುವವರೆಗೂ ಹುಟ್ಟುಹಾಕಿಲ್ಲ. ಪ್ರಸ್ತುತ ದಿನಮಾನಗಳಲ್ಲಿ ಮಹಿಳಾ ಪರ ಕಾನೂನುಗಳ ದುರುಪಯೋಗ, ಮಹಿಳಾ ಮಣಿಗಳ ಹೋರಾಟದ ರೀತಿ, ಆಧುನಿಕ ಮಹಿಳಾವಾದದ ಕಾರಣದಿಂದ ಛಿದ್ರವಾಗುತ್ತಿರುವ ಭಾರತೀಯ ಕೌಟುಂಬಿಕ ವ್ಯವಸ್ಥೆಗಳ ಬಗ್ಗೆ ಕವಲು ಕಾದಂಬರಿಯಲ್ಲಿ ಲೇಖಕರು ಮನಸ್ಸಿಗೆ ಚೆನ್ನಾಗಿ ನಾಟುವಂತೆ ಚಿತ್ರಿಸಿದ್ದಾರೆ.

**ಕೌಟುಂಬಿಕ ನೆಲೆ**

ಪ್ರಸ್ತುತ ದಿನಮಾನಗಳಲ್ಲಿ ಮಹಿಳಾಪರ ಕಾನೂನುಗಳ ದುರುಪಯೋಗ, ಮಹಿಳಾ ಮಣಿಗಳ ಹೋರಾಟದ ರೀತಿ, ಆಧುನಿಕ ಮಹಿಳಾವಾದ ಇವುಗಳ ಕಾರಣದಿಂದ ಭಾರತೀಯ ಕೌಟುಂಬಿಕ ವ್ಯವಸ್ಥೆಯು ಕವಲುದಾರಿಯಲ್ಲಿ ಸಾಗುತ್ತಿದೆ. ಮುಖ್ಯವಾಗಿ ಎರಡು ಮಧ್ಯಮ ವರ್ಗದ ಉನ್ನತ ಕೆಲಸದಲ್ಲಿರುವ ಕುಟುಂಬಗಳಲ್ಲಿ ಉಂಟಾಗುವ ತಲ್ಲಣಗಳ ಬಗ್ಗೆ ಕವಲಿನಲ್ಲಿ ವಿಸ್ತೃತವಾಗಿ ಚಿತ್ರಿತವಾಗಿದೆ. ಕಾದಂಬರಿಯ ಪ್ರಮುಖ ಪಾತ್ರಧಾರಿಯಾದ ಜಯಕುಮಾರ ಸ್ವಂತ ಪರಿಶ್ರಮದಿಂದ ಕಂಪನಿ ಕಟ್ಟಿ ಬೆಳಸಿದ ಸಾಹಸಿ. ಈತನ ಬೆಳವಣಿಗೆಗೆ ಜೊತೆಯಾಗಿ ಹೆಗಲುಕೊಟ್ಟು ದುಡಿದವಳು ಮಡದಿ ವೈಜಯಂತಿ. ಈಕೆ ಅಪಘಾತದಲ್ಲಿ ಮರಣಹೊಂದಿದಾಗ ಎರಡನೇ ಹೆಂಡತಿಯಾಗಿ ಮಂಗಳ ಮಹಿಳಾವಾದದಿಂದ ಪ್ರೇರಣೆಗೊಂಡು ಬ್ಲ್ಯಾಕ್ ಮೇಲ್ ಮಾಡಿ ಅವನ ಮನೆಗೆ ಕಾಲಿಟ್ಟಳು. ಅಪಘಾತದಿಂದ ಮಂದ ಬುದ್ಧಿಯಾಗಿರುವ ಮಗಳು ಪುಟ್ಟಕ್ಕನನ್ನು ಅತ್ಯಂತ ಪ್ರೀತಿಯಿಂದ ಮಾನವೀಯತೆಯಿಂದ ನೋಡಿಕೊಳ್ಳುತ್ತಿರುವ ತಂದೆ ಜಯಕುಮಾರ. ಇವರಿಬ್ಬರ ತಂದೆ ಮಗಳ ಸಂಬಂಧದ ಬಗೆಗೆಯೇ ಅಪಾರ್ಥ ಕಲ್ಪಿಸಿ ನೋಡುವ ಮಂಗಳ ತಾನು ಮದುವೆಯಾದ ಮೇಲೂ ಮೊದಲ ಪ್ರೇಮಿಯೊಡನೆ ಸಂಬಂಧ ಮುಂದುವರಿಸಿಕೊಂಡು ಹೋಗುತ್ತಾಳೆ. ತನ್ನಿಚ್ಛೆಯಂತೆ ನಡೆದುಕೊಳ್ಳಲಿಲ್ಲವೆಂದು ಪೊಲೀಸರಿಗೆ ದೂರು ಕೊಟ್ಟು ಗಂಡನನ್ನು ಜೈಲಿಗೆ ಹಾಕಿಸುತ್ತಾಳೆ. ಮುಂದೆ ಡೈವೋರ್ಸ್ ಗೆ ಅರ್ಜಿ ಹಾಕಿ ಅವನು ಕಷ್ಟಪಟ್ಟು ದುಡಿದು ಸಂಪಾದಿಸಿದ ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಯಾವುದೇ ಪರಿಶ್ರಮವಿಲ್ಲದೇ ಪಡೆಯುತ್ತಾಳೆ. ಜಯಕುಮಾರ ಬುದ್ಧಿಮಾಂದ್ಯ ಮಗಳ ಜೊತೆ ಬೀದಿಗೆ ಬೀಳುತ್ತಾನೆ.

ಈ ಕಾದಂಬರಿಯಲ್ಲಿ ಬರುವ ಇನ್ನೊಂದು ಕುಟುಂಬದಲ್ಲಿ ವಿನಯಚಂದ್ರ ಎಂಬುವವನು ಕಂಪನಿಯೊಂದರಲ್ಲಿ ಉನ್ನತ್ತ ಹುದ್ದೆಯಲ್ಲಿದ್ದರೂ ತನ್ನ ಹಳ್ಳಿಯ ಜೀವನವನ್ನು ತನ್ನ ತಾಯಿ ತಮ್ಮಂದಿರನ್ನು ಮರೆಯದಂತಹ ಸಹೃದಯ ಜೀವಿ. ಇದಕ್ಕೆ ವಿರುದ್ಧವಾಗಿ ಆಧುನಿಕತೆಯನ್ನು ಮೈಗೂಡಿಸಿಕೊಂಡಿರುವ ಯೂನಿವರ್ಸಿಟಿಯೊಂದರಲ್ಲಿ ಇಂಗ್ಲಿಷ್ ಅಧ್ಯಾಪಕಿಯಾಗಿರುವ ಇಳಾ ಅವನ ಹೆಂಡತಿ. ಅವರಿಬ್ಬರ ಮುದ್ದಿನ ಮಗಳು ಸುಜಯಾಳಿಗೆ ತಂದೆಯಂತೆ ಹಳ್ಳಿ ವಾತಾವರಣ ಇಷ್ಟ. ಪತಿಗೆ ಬಡ್ತಿ ಸಿಕ್ಕಿ ದೆಹಲಿಗೆ ಹೋಗಬೇಕಾಗಿ ಬಂದಾಗ ಅವನ ಜೊತೆ ಹೋಗಲು ಒಪ್ಪದೆ, ಇಳಾ ಬೆಂಗಳೂರಿನಲ್ಲಿ ಉಳಿಯುತ್ತಾಳೆ. ಅಲ್ಲದೆ ಮುಂದೆ

ಮಂತ್ರಿಯೊಬ್ಬನ ಜೊತೆ ಸ್ನೇಹ ಬೆಳೆಸಿ ಅದು ದೈಹಿಕ ಸಂಬಂಧದವರೆಗೂ ಮುಂದುವರಿಯುತ್ತದೆ. ಅದನ್ನು ಮಗಳು ಪ್ರಶ್ನಿಸಿದಾಗ ನೀನು ಬಾಯ್ ಫ್ರೆಂಡ್ ನ ಮಾಡಿಕೋ ಎನ್ನುವ ಮಾತು ತಾಯಿಯಿಂದ ಬರುತ್ತದೆ. ಮಂತ್ರಿಯ ಜೊತೆಗಿದ್ದ ಅನಿಲ್ ಕುಮಾರನಿಗೆ ಮಂತ್ರಿಯ ಸಂಬಂಧದ ಬಗ್ಗೆ ಗೊತ್ತಾಗಿ ಗುಟ್ಟಾಗಿ ಮಂತ್ರಿ ಮತ್ತು ಇಳಾ ಒಟ್ಟಿಗಿದ್ದ ಫೋಟೋ ತೆಗೆದು ವಿನಯಚಂದ್ರನಿಗೆ ಕಳುಹಿಸಿಕೊಡುತ್ತಾನೆ ಈ ವಿಷಯ ಅರಿತ ಆತ ಕೋರ್ಟಿಗೆ ಸಲ್ಲಿಸಿ ಯಾವುದೇ ಪರಿಹಾರ ನೀಡದೇ ಡೈವೋರ್ಸ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ.

ಈ ಕಾದಂಬರಿಯಲ್ಲಿ ಮಂಗಳೆ ಮತ್ತು ಇಳಾ ಪಾತ್ರಗಳು ಆಧುನಿಕ ಮಹಿಳಾವಾದವನ್ನು ಪ್ರತಿನಿಧಿಸಿದ್ದಾರೆ. ಇವರಿಬ್ಬರು ತಾವೂ ಗಂಡನ ಶೋಷಣೆಯಿಂದ ಮುಕ್ತರಾಗಬೇಕು, ನಾವೂ ಅವರಿಗೆ ಸಮಾನರು, ನಮಗೂ ಸಮಾನವಾದ ಹಕ್ಕಿದೆ ಎಂದು ಹೋರಾಟಮಾಡಿದರೂ, ವಿವಾಹೇತರ ಸಂಬಂಧಗಳನ್ನು ಇಟ್ಟುಕೊಳ್ಳುವುದರ ಮೂಲಕ ಮಹಿಳಾವಾದದ ವಾಸ್ತವತೆಗೆ ಧಕ್ಕೆಯನ್ನು ತರುವುದಲ್ಲದೇ ತಮ್ಮ ಗಂಡಂದಿರೇ ನಮ್ಮ ಮೇಲೆ ದೌರ್ಜನ್ಯವೆಸಗುತ್ತಿದ್ದಾರೆಂದು ದೂರಿದರೂ ಕಡೆಗೆ ತಾವೇ ಅಪಮಾನಿತರಾಗುತ್ತಾರೆ ಇದಲ್ಲದೇ ಅವರಿಗೇ ಅರಿವಿಲ್ಲದೇ ಅಕ್ರಮ ಸಂಬಂಧದಲ್ಲಿ ತೊಡಗಿ ಮತ್ತೆ ಪುರುಷರ ದೌರ್ಜನ್ಯದ ಸುಳಿಗೆ ತಾವೇ ಸಿಲುಕಿದ್ದಾರೆ.

ಮಂಗಳೆ ತಾನು ಗಂಡನ ವಿರುದ್ದದ ಹೋರಾಟದಲ್ಲಿ ಗೆದ್ದು, ಆಸ್ತಿಯಲ್ಲವನ್ನು ಪಡೆದುಕೊಂಡೆ ಎಂದು ಬೀಗಿದರೂ, ಪುಟ್ಟಕ್ಕನಂತಹ ಬುದ್ದಿಮಾಂದ್ಯಳನ್ನು ಬೀದಿಗೆ ತಳ್ಳಿದ್ದು ತನ್ನ ಮಹಿಳಾವಾದದ ನೆಲೆಯ ನೈತಿಕತೆಗೆ ವಿರುದ್ದವಾದ ಶೋಷಣೆಯಲ್ಲವೇ? ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಇಂದು ಗಂಡ ಹೆಂಡತಿ ಸಂಬಂಧಗಳಲ್ಲಿ ಪ್ರೀತಿ, ನಂಬಿಕೆ, ಭಾವನಾತ್ಮಕ ಸಂಬಂಧಗಳು ಮರೆಯಾಗಿ ಕೇವಲ ವ್ಯವಹಾರ ಮಾತ್ರ ಉಳಿದುಕೊಂಡಿದೆ ಎನ್ನುವದನ್ನು ಕವಲಿನಲ್ಲಿ ಹೇಳಿದ್ದಾರೆ. ಕಾದಂಬರಿ ಓದುತ್ತಾ ಹೋಗುತ್ತಿದ್ದಂತೆ ಅದರಲ್ಲಿನ ಪಾತ್ರಗಳು ಘಟನೆಗಳು ನಮ್ಮ ಸುತ್ತಮುತ್ತ ನಡೆಯುತ್ತಿದೆ ಎನ್ನುವಷ್ಟರ ಮಟ್ಟಿಗೆ ಆಪ್ತವಾಗಿದೆ. ಉನ್ನತ ಶಿಕ್ಷಣಗಳಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಆಧುನಿಕ ಮಹಿಳೆಯರು ಹೊಸ ಸಂಸ್ಕೃತಿಯನ್ನು ಒಪ್ಪಿಕೊಂಡು, ಇತ್ತ ಭಾರತೀಯ ಸಂಸ್ಕೃತಿಯನ್ನು ಪಾಲಿಸಲಾರದೇ ಒದ್ದಾಡುವ ಸಂದಿಗ್ದ ಪರಿಸ್ಥಿತಿಯನ್ನು ಕವಲು ಕಾದಂಬರಿಯಲ್ಲಿ ಕಾಣಬಹುದು.

**ರಾಜಕೀಯನೆಲೆ**

ರಾಜಕೀಯ ನೆಲೆಯಿಂದ ನಾವು ಈ ಕಾದಂಬರಿಯನ್ನು ಪ್ರವೇಶಿಸಿದಾಗ ಮುಖ್ಯವಾಗಿ ಎರಡು ಮಧ್ಯಮ ವರ್ಗದ ಉನ್ನತ ಕೆಲಸದಲ್ಲಿರುವ ಕುಟುಂಬಗಳಲ್ಲಿ ಉಂಟಾಗುವ ತಲ್ಲಣಗಳ ಬಗ್ಗೆ ಚರ್ಚಿತವಾಗಿದೆ. ಕಾದಂಬರಿಯ ಪ್ರಮುಖ ಪಾತ್ರಧಾರಿಯಾದ ಜಯಕುಮಾರ ಸ್ವಂತ ಪರಿಶ್ರಮದಿಂದ ಕಂಪನಿ ಕಟ್ಟಿ ಬೆಳಸಿದ ಸಾಹಸಿ. ಈತನ ಬೆಳವಣಿಗೆಗೆ ಜೊತೆ ಜೊತೆಯಾಗಿ ಹೆಗಲುಕೊಟ್ಟು ದುಡಿದವಳು ಮಡದಿ ವೈಜಯಂತಿ ಅಪಘಾತದಲ್ಲಿ ಮರಣಹೊಂದಿದಾಗ ಎರಡನೇ ಹೆಂಡತಿಯಾಗಿ ಅದು ಒಂದು ರೀತಿಯಲ್ಲಿ ಬ್ಲ್ಯಾಕ್ ಮೇಲ್ ಮಾಡಿ ಅವನ ಮನೆಗೆ ಕಾಲಿಟ್ಟವಳು ಮಹಿಳಾವಾದದಿಂದ ಪ್ರೇರಣೆಗೊಂಡು ಬದುಕುತ್ತಿರುವ ಮಂಗಳೆ. ಅಪಘಾತದಿಂದ ಮಂದ ಬುದ್ದಿಯಾಗಿರುವ ಮಗಳು ಪುಟ್ಟಕ್ಕನನ್ನು ಅತ್ಯಂತ ಪ್ರೀತಿಯಿಂದ ಮಾನವೀಯತೆಯಿಂದ ನೋಡಿಕೊಳ್ಳುತ್ತಿರುವ ತಂದೆ ಜಯಕುಮಾರ. ಇವರಿಬ್ಬರ ತಂದೆ ಮಗಳ ಸಂಬಂಧ ಬಗ್ಗೆನೆ ಅಪಾರ್ಥ ಕಲ್ಪಿಸಿ ನೋಡುವ ಮಂಗಳ ತಾನು ಮದುವೆಯಾದ ಮೇಲು ಮೊದಲ ಪ್ರೇಮಿಯೊಡನೆ ಸಂಬಂಧ ಮುಂದುವರಿಸಿಕೊಂಡು ಹೊಗುತ್ತಾಳೆ. ತನ್ನಿಚ್ಚೆಯಂತೆ ನಡೆದುಕೊಳ್ಳಲಿಲ್ಲವೆಂದು ಪೋಲಿಸರಿಗೆ ದೂರು ಕೊಟ್ಟು ಗಂಡನನ್ನು ಜೈಲಿಗೆ ಹಾಕುತ್ತಾಳೆ. ಮುಂದೆ ಡೈವೋರ್ಸ್ ಗೆ ಅರ್ಜಿ ಹಾಕಿ ಅವನು ಕಷ್ಟಪಟ್ಟು ದುಡಿದು ಸಂಪಾದಿಸಿದ ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಯಾವುದೇ ಪರಿಶ್ರಮವಿಲ್ಲದೇ ಪಡೆಯುತ್ತಾಳೆ.

ವಿನಯಚಂದ್ರ. ಅಲ್ಲದೆ ಮುಂದೆ ಮಂತ್ರಿಯೊಬ್ಬನ ಜೊತೆ ಸ್ನೇಹ ಬೆಳಸಿ ಅದು ದೈಹಿಕ ಸಂಬಂಧದವರೆಗೂ ಮುಂದುವರಿಯುತ್ತದೆ. ಅದನ್ನು ಮಗಳು ಪ್ರಶ್ನಿಸಿದಾಗ ನೀನು ಬಾಯ್ ಫ್ರೆಂಡ್ ನ ಮಾಡಿಕ್ಕೊ ಎನ್ನುವ ಮಾತು ತಾಯಿಯಿಂದ ಬರುತ್ತದೆ.

ಇದು ಅನಿಲ್ ಕುಮಾರನಿಗೆ ಗೊತ್ತಾಗಿ ಗುಟ್ಟಾಗಿ ಮಂತ್ರಿ ಮತ್ತು ಅವಳ ಸಂಬಂಧಗಳ ಫೋಟೋ ತೆಗೆದು ಅವಳಿಗೆ ಒಂದು ರೀತಿಯಲ್ಲಿ ಬ್ಲಾಕ್ ಮೇಲ್ ಮಾಡುವುದರ ಮೂಲಕ ಯಾವುದೇ ಪರಿಹಾರ ನೀಡದೇ ಅವಳಿಂದ ಡೈವೋರ್ಸ್ ಪಡೆದುಕೊಳ್ಳಲು ಯಶಸ್ವಿಯಾಗುತ್ತಾನೆ. ಮಂಗಳೆ ಮತ್ತು ಇಳಾ ಪಾತ್ರಗಳು ಆಧುನಿಕ ಮಹಿಳಾವಾದವನ್ನು ಪ್ರತಿನಿಧಿಸಿದ್ದಾರೆ. ಇವರಿಬ್ಬರು ತಾವೂ ಗಂಡನ ಶೋಷಣೆಯಿಂದ ಮುಕ್ತರಾಗಬೇಕು,

ನಾವೂ ಅವರಿಗೆ ಸಮಾನರು, ನಮಗೂ ಸಮಾನವಾದ ಹಕ್ಕಿದೆ ಎಂದು ಹೋರಾಟಮಾಡಿದರೂ, ವಿವಾಹೇತರ ಸಂಬಂಧಗಳನ್ನು ಇಟ್ಟುಕೊಳ್ಳುವದರ ಮೂಲಕ ಇನ್ನೊಂದು ರೀತಿಯಲ್ಲಿ ತಮಗೆ ಗೊತ್ತಿಲ್ಲದ ರೀತಿಯಲ್ಲಿ ಪುರುಷರ ದೌರ್ಜನ್ಯಕ್ಕೆ ಒಳಗಾದ ಹಾಗಾಗಿಲ್ಲವೇ? ಗಂಡನ ವಿರುದ್ಧ ಸಾರ್ವಜನಿಕವಾಗಿ ಹೋರಾಡುವ ಆಧುನಿಕ ಮಹಿಳಾ ಮಣಿಗಳು ತಮ್ಮ ವಿವಾಹೇತರ ಸಂಬಂಧಗಳನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳಲು ಯಾಕೆ ಹಿಂಜರಿಯುತ್ತಾರೆ? ಮಂಗಳೆ ತಾನೂ ಗಂಡನ ವಿರುದ್ಧದ ಹೋರಾಟದಲ್ಲಿ ಗೆದ್ದೆ ಎಂದು ಕೊಂಡರೂ ಪುಟ್ಟಕ್ಕನಂತಹ ಬುದ್ಧಿಮಾಂದ್ಯಳನ್ನು ಬೀದಿಗೆ ತಳ್ಳಿದ್ದು ಇನ್ನೊಂದು ಮಹಿಳೆಯ ಶೋಷಣೆಯಲ್ಲವೇ? ಇದು ಮಹಿಳಾ ವಾದಕ್ಕಾಗಲಿ, ಮಹಿಳಾಪರ ಕಾನೂನುಗಳಿಗಾಗಲಿ ತಪ್ಪು ಎನಿಸಲಿಲ್ಲವೇ?ಮಹಿಳೆಯರಿಂದ ಮಹಿಳೆಗೆ ಆಗುವ ಶೋಷಣೆಗೆ ಮಹಿಳಾ ಹೋರಾಟಗಾರರು ಏನನ್ನುತ್ತಾರೆ? ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಇಂದು ಗಂಡ ಹೆಂಡತಿ ಸಂಬಂಧಗಳಲ್ಲಿ ಪ್ರೀತಿ, ನಂಬಿಕೆ, ಭಾವನಾತ್ಮಕ ಸಂಬಂಧಗಳು ಮರೆಯಾಗಿ ಕೇವಲ ವ್ಯವಹಾರ ಮಾತ್ರ ಉಳಿದುಕೊಂಡಿದೆ ಎನ್ನುವದನ್ನು ಕವಲಿನಲ್ಲಿ ಹೇಳಿದ್ದಾರೆ. ಕಾದಂಬರಿ ಓದುತ್ತ ಹೋಗುತ್ತಿದ್ದಂತೆ ಅದರಲ್ಲಿನ ಪಾತ್ರಗಳು ಘಟನೆಗಳು ನಮ್ಮ ಸುತ್ತಮುತ್ತ ನಡೆಯುತ್ತಿದೆ ಎನ್ನುವಷ್ಟರ ಮಟ್ಟಿಗೆ ಆಪ್ತವಾಗಿದೆ. ಉನ್ನತ ಶಿಕ್ಷಣಗಳಲ್ಲಿ ಪಾಶ್ಚಿಮಾತ್ಯದ ಪ್ರಭಾವೋ ಏನೋ ಆಧುನಿಕ ಮಹಿಳೆಯರು, ಮುಕ್ತ ಸಂಸ್ಕೃತಿಯನ್ನು ಬಿಡಲಾಗದೆ, ಇತ್ತ ಭಾರತೀಯ ಸಂಸ್ಕೃತಿಯನ್ನು ಒಪ್ಪಿಕೊಳ್ಳಲಾಗದೆ ಒದ್ದಾಡುವ ಸಂದಿಗ್ಧ ಪರಿಸ್ಥಿತಿಯನ್ನು "ಕವಲು"ನಲ್ಲಿ ಚಿತ್ರಿಸಿದ್ದಾರೆ. ಕವಲು ಪೂರ್ತಿ ಓದಿ ಮುಗಿಸಿದಾಗ ಏಲ್ಲೋ ಒಂದು ಕಡೆ ನಮ್ಮ ಮನದ ಮೂಲೆಯಲ್ಲಿ ಇಂದಿನ ಆಧುನಿಕ ಮಹಿಳೆಯರ ಬಗ್ಗೆ ನಕರಾತ್ಮಕ ಭಾವನೆ ಮೂಡಿದರೆ ತಪ್ಪು ನಮ್ಮದಲ್ಲ. "ಕವಲು" ಕಾದಂಬರಿಯದು.

## ಸ್ತ್ರೀವಾದ ಮತ್ತು ಪುರುಷವಾದಗಳ ತುಲನೀಕರಣ

(https://kn.wikipedia.org/wiki/ ಲಿಂಗ ಸಮಾನತೆ ಹಾಗೂ ಮಹಿಳಾ ಸಬಲೀಕರಣ)

ಲಿಂಗ ಸಮಾನತೆ ಹಾಗೂ ಮಹಿಳಾ ಸಬಲೀಕರಣಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಅವಶ್ಯಕ.ಹೆಣ್ಣು ಮತ್ತು ಗಂಡು ಎಂಬ ಜೈವಿಕ ಲಕ್ಷಣಗಳು ಲಿಂಗ ಎಂಬುದಾಗಿ ವ್ಯಕ್ತಿಯ ಹುಟ್ಟಿನಿಂದಲೇ ನಿರ್ಧರವಾಗುತ್ತದೆ. ಲಿಂಗವು ಸೃಷ್ಟಿಯ ಸಹಜ ಸ್ಥಿತಿ. ದೈಹಿಕ ರಚನೆ ಹಾಗೂ ಸಂತಾನೋತ್ಪತಿಯ ಕ್ರಿಯೆಗಳಲ್ಲಿ ಹೆಣ್ಣು ಹಾಗು ಗಂಡು ವಿಶೇಷವಾದ ಗುಣಗಳನ್ನು ಹೊಂದಿದ್ದಾರೆ. ಈ ರೀತಿ ಜೈವಿಕವಾಗಿ ಬಂದಿರುವ ಲಿಂಗವು ಪಕೃತಿದತ್ತವಾದ ಗುಣವಾಗಿದ್ದು ಜನಾಂಗದ ಬೆಳವಣಿಗೆ ಹಾಗೂ ಸಮಾಜ ಜೀವನಕ್ಕೆ ಬಹಳ ಮುಖ್ಯ. ಹೆಣ್ಣು ಗಂಡುಗಳಲ್ಲಿ ಕೆಲವೊಂದು ವಿಶೇಷ ಗುಣಲಕ್ಷಣಗಳು,ಕ್ರೋಮೋಸೋಮುಗಳು, ದೇಹ ರಚನೆ ಹಾಗೂ ಸಂತಾನೋತ್ಪತಿಯ ವಿಶೇಷತೆ ಇರುವುದು ಜೈವಿಕ ಗುಣ.ಆದರೆ ಸ್ತ್ರೀ– ಪುರುಷರ ನಡುವೆ ಅಸಮಾನತೆ ಮತ್ತು ಭೇದ ಭಾವಗಳು ಜೈವಿಕ ಹುಟ್ಟಿನಿಂದ ಬಂದಿಲ್ಲ. ಆದರೆ ಅದು ಒಂದು ಸಾಮಾಜಿಕ ಸಂಸ್ಕೃತಿಯು ಆಚರಣೆಗೆ ತರುತ್ತದೆ. ಆದುದರಿಂದ ಲಿಂಗವೂ ಜೈವಿಕವಾದ ಮತ್ತು ಪ್ರಕೃತಿ ಸಹಜಗುಣವಾಗಿಯೂ, ಜಂಡರ್ ಎನ್ನುವುದು ಒಂದು ಆಚರಣೆಯಾಗಿದೆ ಎನ್ನಬಹುದು ಸ್ತ್ರೀವಾದ, ಪಾಶ್ಚಿಮಾತ್ಯರ ಸಮಾನತೆಯ ವಿಚಾರಗಳನ್ನು ಭಾರತೀಯರು ಹೇಗೆ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ ಮತ್ತು ಅದು ಪ್ರಸ್ತುತ ಕುಟುಂಬ ರಚನೆ ಮತ್ತು ಕೌಟುಂಬಿಕ ಸಂಬಂಧಗಳ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ ಎಂಬುದನ್ನು ತೋರಿಸುವ ಉದ್ದೇಶವನ್ನು ಲೇಖಕರು ಹೇಳುವಲ್ಲಿ ಯಶಸ್ವಿಯಾಗಿದ್ದಾರೆ.

ಅವನು ಅದೇ ಸಮಯದಲ್ಲಿ ಸಂಭವಿಸುವ ಎರಡು ವಿಭಿನ್ನ ಕಥೆಗಳನ್ನು ಹೇಳುತ್ತಾನೆ ಮತ್ತು ಕಥೆಗಳನ್ನು ಅವುಗಳ ಸ್ಪಷ್ಟ ತೀರ್ಮಾನಗಳಿಗೆ ಕೊಂಡೊಯ್ಯಲು ನಾಲ್ಕು ಮುಖ್ಯ ಪಾತ್ರಗಳನ್ನು ಆರಿಸಿಕೊಂಡಿದ್ದಾನೆ. ಅವರೆಲ್ಲರೂ ಬೂದು ಛಾಯೆಯನ್ನು ಹೊಂದಿದ್ದಾರೆ ಮತ್ತು ನೀವು ವಸ್ತುನಿಷ್ಠವಾಗಿ ಯೋಚಿಸಿದರೆ ಅವುಗಳಲ್ಲಿ ಯಾವುದನ್ನಾದರೂ ನೀವು ಬದಿಗಿಡಲು ಸಾಧ್ಯವಿಲ್ಲ.

ಅವರು ಸಮಾಜದಲ್ಲಿ ಕುಟುಂಬದ ಬಗ್ಗೆ ಪ್ರಸ್ತುತ ಅಸ್ತಿತ್ವದಲ್ಲಿರುವ ಕಲ್ಪನೆಯನ್ನು ಉಲ್ಲೇಖಿಸಿ ಹೇಳುತ್ತಿದ್ದಾರೆ. ಆದ್ದರಿಂದ ಲೇಖಕರು ಸ್ವಲ್ಪ ಪಕ್ಷಪಾತಿ ಎಂದು ಜನರಿಗೆ ಬರಬಹುದು, ಆದರೆ ನನ್ನ ಅಭಿಪ್ರಾಯದಲ್ಲಿ ಅವರು ಸಮಾಜದ ಪ್ರಸ್ತುತ ಪುಸ್ತಕವು ಸ್ವಲ್ಪ ನಿಧಾನವಾಗಿರುತ್ತದೆ ಮತ್ತು ಪುಸ್ತಕದ ದ್ವಿತೀಯಾರ್ಧದಲ್ಲಿ ವೇಗವನ್ನು ಪಡೆದುಕೊಳ್ಳುತ್ತದೆ. ಭಾರತೀಯ ಸಂಸ್ಕೃತಿಯನ್ನು ಅನುಸರಿಸಬೇಕೆ ಅಥವಾ

ಪಾಶ್ಚಿಮಾತ್ಯ ಮೌಲ್ಯಗಳಿಂದ ಪ್ರಭಾವಿತವಾದ ಸಂಸ್ಕೃತಿಯನ್ನು ಅನುಸರಿಸಬೇಕೆ ಎಂದು ಲೇಖಕರು ಶಿಫಾರಸು ಮಾಡುತ್ತಿರುವುದನ್ನು ಸೂಚಿಸಲು ಪುಸ್ತಕದಲ್ಲಿ ಏನೂ ಇಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, ಭಾರತದಲ್ಲಿನ ಪ್ರಸ್ತುತ ಸಾಮಾಜಿಕ ಮತ್ತು ನೈತಿಕ ಸೆಟ್ಟಿಂಗ್‌ಗಳಲ್ಲಿ ಸ್ಪಷ್ಟವಾದ, ಸ್ಪಷ್ಟವಾದ ತೀರ್ಮಾನಕ್ಕೆ ಕಾರಣವಾಗುವ ಕೆಲವು ಘಟನೆಗಳೊಂದಿಗೆ ಕಥೆಗಳನ್ನು ಹೇಳುವುದಷ್ಟೇ ಅವನು ಮಾಡುತ್ತಾನೆ.

ಈ ಪುಸ್ತಕದ ಬಗ್ಗೆ ನನ್ನ ಅನಿಸಿಕೆಯನ್ನು ಇನ್ನಷ್ಟು ವಿವರಿಸಲು ಇನ್ನೂ ಕೆಲವು ಸಾಲುಗಳನ್ನು ಸೇರಿಸಲಾಗಿದೆ

ಗಂಡು ಓದಿದ್ದರೆ ಫೆಮಿನಿಸ್ ಆಗ್ತಾನೆ ಅನ್ನೋ ಸಾಲು ಕಾದಂಬರಿಯಲ್ಲಿ ಬರುತ್ತದೆ ಹೀಗೆ ಗಂಡಸಾಗಿರುವಲ್ಲಿ ಮತ್ತೆ ಮಂಗಳೇ ಮತ್ತು ಚಿತ್ರ ಅವರು ಗಂಡಸಾಗಿರುವ ಬಾಹ್ಯ ರೂಪ ಅವರ ಕುಂಕುಮವಿಲ್ಲದ ಹಣೆ, ಕುತ್ತಿಗೆ ಬಾಪ್ ಕಟ್ ಧರಿಸಿರುವ ಪ್ಯಾಂಟ್ ಶರ್ಟ್ ಕಣ್ಣಿಗೆ ಕಣ್ಣು ಮಿಠಲಾಯಿಸಿ ತಮ್ಮ ಪರವಾಗಿ ವಾದಿಸುವ ಇವೆಲ್ಲ ಗಂಡಸರಿಗೆ ಹೇಗೆ ಆಕರ್ಷಕವಲ್ಲ ಏಕೆಂದರೆ ಇವು ಆನ್ ಫೆಮಿನೈಸ್ ಎಂದು ಕಾದಂಬರಿ ಅನೇಕ ಸಲ ಒತ್ತಿ ಒತ್ತಿ ಹೇಳುತ್ತದೆ ಈ ಪಾತ್ರಗಳ ವಿರುದ್ಧವಾಗಿದ್ದು ಮರಣ ಹೊಂದಿರುವ ಒಬ್ಬ ಹೆಣ್ಣು ಮಗಳು
ಪಾತ್ರ ವೈ ಜಯಂತಿ ಮತ್ತು ಬುದ್ಧಿಮಾಂದ್ಯವಿರುವ ಇನ್ನೊಂದು ಹೆಣ್ಣು ಪಾತ್ರ ಪುಟ್ಟಕ್ಕ ಯು ಹೆಣ್ಣುತನದ ಆದರ್ಶವಾಗಿ ಕಾದಂಬರಿಯಲ್ಲಿ ಮೆರೆಯುತ್ತವೆ ಹಣೆಗೆ ಕುಂಕುಮ ವಿಟ್ಟು ಹೊಡಿಯುತ್ತಾರೆ ಅನ್ನುವುದು ಇವರ ಹೆಣ್ತದ ಸಂಕೇತ ಆಗಿರಬಹುದು ಅಂದರೆ ನಾವಿಲ್ಲಿ ಗಮನಿಸಬೇಕಾದ ಅಂಶ ಇಂಥ ಹೆಣ್ಣುತನದ ಆದರ್ಶಗಳು ಇಲ್ಲಿ ಸತ್ತಿದ್ದಾವೆಯೇ ಇಲ್ಲ ಗಂಡಸರ ಸೃಷ್ಟಿಗಳು ಇಲ್ಲಿ ಬದುಕಿದ್ದರೆ ಏನು ಅರ್ಥವಾಗದ ಅರ್ಥವಾದರೂ ಹೇಳಿಕೊಳ್ಳಲಾಗದ ಬುದ್ಧಿಮಾಂದ್ಯರು ಇಂಥವರು ಮಾತ್ರ ಕಾದಂಬರಿಯಲ್ಲಿ ಬರುವ ಗಂಡು ಪಾತ್ರಗಳ ಮೆಚ್ಚುಗೆ ಪಡೆಯುವವರು ಅಂದರೆ ಗಂಡಸರಿಗೆ ಆಕರ್ಷಕವಾಗಿ ಕಾಣುವವರು ಸತ್ತುಹೋಗಿ ಹೊಂದಿರುವ ಪಟವಾಗಿ ಗೋಡೆಯನ್ನು ಅಲಂಕರಿಸಿರುವವರು ಮತ್ತು ವಿದ್ಯಾ ಬುದ್ಧಿ ಇರದ ತೊದಲು ಮಾತನಾಡುವ ಯೋಚನಾ ಶಕ್ತಿ ಜ್ಞಾಪಕ ಶಕ್ತಿ ಇಡೀ ಸ್ತ್ರೀ ಸ್ಥಿತಿಯವರ ಪಾತ್ರ ಇನ್ನು ಗಂಡಸ್ತನದ ಮುಖ್ಯ ಸಂಕೇತ ಕಾದಂಬರಿಯ ಪ್ರಕಾರ ಗಂಡಿನ ಲೈಂಗಿಕ ತನ್ನ ಗಂಡಸ್ತನವನ್ನು ಪದೇ ಪದೇ ಸಾಬೀತುಪಡಿಸಿಕೊಳ್ಳಲು ಹೆಂಡತಿ ಅಲ್ಲದಿದ್ದರೆ ಲೈಂಗಿಕ ಆಸಕ್ತಿಯ ಮಹಿಳೆರಾದರೂ ಸರಿ ಅಥವಾ ಕೋಟ್ಯಂತರ ರೂಪಾಯಿ ಸಂಪಾದಿಸುವ ಹುದ್ದೆ ವಿದೇಶಿಗಳಿಗೆ ಹೋಗುವ ನೆಲೆಸುವ ಯೋಗ್ಯತೆ ಅದು ಪರಿವಾರದ ಮೇಲೆ ಎಂತದ್ದೇ ಪ್ರಭಾವ ಬೀರಲಿ ಅಂದರೆ ಗಂಡು ತನಗೋಸ್ಕರ ತನ್ನ ಗಂಡಸ್ತನನ್ನು ಕಾಪಾಡುವುದು ಕೋಸ್ಕರ ಏನು ಮಾಡಿದರು ತಪ್ಪಾಗದು ಹಲವು ಬಾರಿ ತಾನು ತಗೋಳೋ ದಾರಿ ಸರಿ ಇಲ್ಲದಿದ್ದರೂ ತೆರಬೇಕಾದ ಬೆಲೆ ಅಧಿಕವಾದರೂ ಗಂಡಸ್ತನವನ್ನು ಕಾಪಾಡಿಕೊಳ್ಳದೆ ಬೇರೆ ಪರಿಹಾರದ ಹಾದಿ ಇಲ್ಲ ಎಂದು ಕಾದಂಬರಿ ಒತ್ತಿ ಹೇಳುತ್ತದೆ. ಹೀಗೆ ಗಂಡಸ್ತನವನ್ನು ಕಾಪಾಡುವ ಬಲವಾದ ಒರೆಯನ್ನು ಒತ್ತಡವನ್ನು ಕಾದಂಬರಿ ಗಂಡಸರ ಮೇಲೆ ತರುತ್ತದೆ ಹೆಣ್ಣು ಹೆಣ್ಣುತನವನ್ನು ಸಾಬೀತುಪಡಿಸುವ ಗೋಜಿಗೆ ಹೋಗದಿದ್ದರೆ ಅವಳು ಗಂಡಸಾಗಿ ಬಿಡುತ್ತಾಳಲ್ಲವೇ ಹಾಗೆ ಆಗುವುದು ವಕ್ರ ಅಸಹಾಯಕರ ಕೂಡ ಅಂತ ಕಾದಂಬರಿ ಸೂಚಿಸುತ್ತದೆ.

ಅದೇನು ಉರುಳಿದೆಯೋ ಗಂಡಸ್ತನದಲ್ಲಿ ಹೆಣ್ಣುತನದಲ್ಲಿ ಜೀವಮಾನವೆಲ್ಲ ಅದನ್ನು ಕಾಯ್ದಿಸಿಕೊಳ್ಳಲು ಎಣಗಲು

ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಅಂಶ ಗಂಡು ಗಂಡಸಾಗಬೇಕಾದರೆ ಹೆಣ್ಣು ಕೀಳಾದ ಸ್ಥಾನ ವಹಿಸಿದರೆ ಮಾತ್ರ ಅದು ಸಾಧ್ಯ ಎಂಬುವುದು ಕಾದಂಬರಿಯ ಮೂಲ ನಿಲುವು ಅವಳು ಲೈಂಗಿಕ ಆಸಕ್ತಿಯ ಮಹಿಳೆ ಅನಿಸಿಕೊಂಡರು ಪಾಪದ ಹೆಣ್ಣಾದರೆ ಗಂಡಸಿಗೆ ಬರುವ ನೈತಿಕ ಬಲದಿಂದ ಅವನ ಲೈಂಗಿಕ ಕ್ರಿಯೆ ಚುರುಕಾಗುತ್ತದೆ. ಇಲ್ಲ ಅವಳು ಗಂಡಸಿನ ಕೈ ಕೆಳಗೆ ದುಡಿಯುವ ಆಪ್ತ ಸಹಾಯಕಳಾಗಿ ಅಥವಾ ಹೆಂಡತಿ ಆದರೆ ಗಾಯಾಬು ಅನ್ನುತ್ತೆ ಈ ಒಂದು ಕಾದಂಬರಿ ಇಲ್ಲಿ ಕಾದಂಬರಿಯ ಇನ್ನೊಂದು ವಿಶೇಷವನ್ನ ಗಮನಿಸಬೇಕು ಹೆಣ್ಣು ಹೆಂಡತಿ ತನ್ನನ್ನ ಬಹುವಚನದಲ್ಲಿ ಮಾತನಾಡಿಸಲಿ ಅಂತ ಇಲ್ಲಿ ಬರುವ ಅನೇಕ ಗಂಡು ಪಾತ್ರಗಳು ಇಷ್ಟಪಡುತ್ತವೆ. ಇಲ್ಲಿನ ಗಂಡು ಪಾತ್ರಗಳಿಗೆ ಅಸಮಾನತೆ ಲೈಂಗಿಕ ಸಂಬಂಧದ ತಳಹದಿ ಸಮಾನತೆ ಉಳ್ಳ ಗಂಡು ಹೆಣ್ಣಿನ ಸಂಬಂಧ ಕಲ್ಪಿಸಲು ಅಸಾಧ್ಯವಾಗಿದೆ ಗಂಡು ಹೆಣ್ಣಿನ ಸಂಬಂಧ ಅದು ಅಸಹಾಯಕರ ಎನ್ನುತ್ತದೆ. ಈ ಕಾದಂಬರಿ ಅಂದರೆ ಗಂಡಸು ಎಂತ ದೊಡ್ಡ ಕಂಪನಿಯ ಮಾಲೀಕನೇ

ಆಗಿದ್ದರೂ ಸಹ ದೇಶ ವಿದೇಶಗಳಲ್ಲಿ ವ್ಯವಹಾರ ನಡೆಸುವ ವ್ಯವಸ್ಥಾಪಕನಾದರೂ ಕೂಡ ಹೆಚ್ಚೇನು ಹಲ್ಲ ಸ್ವಲ್ಪ ಮುಂಬರುವ ಆಕಾಂಕ್ಷೆ ಇರುವ ಹೆಣ್ಣು ಮಕ್ಕಳು ಕೂಡ ಹೆಣ್ಣುಗಳೇ ಅಲ್ಲ ಎಂದು ಘೋಷಿಸುವುದಲ್ಲದೆ ಅವಳೊಂದು ಭಯ ಹುಟ್ಟಿಸುವ ದೆವ್ವ ಎಂದು ಕ್ರೂರಿ ಯಂತೆ ವರ್ತಿಸುವ ಗಂಡಸ್ತಿನ ಎತ್ತು ತೋರಿಸುತ್ತಿದೆ ಗಂಡು ಹೆಣ್ಣುಗಳ ನಡುವೆ ಬಲವಾಗಿ ಇರಬೇಕಾದಂತಹ ಅಪನಂಬಿಕೆ ಎಂಥ ಪರಿಸ್ಥಿತಿಯಲ್ಲಿ ಆಗಲಿ ಗಂಡಸು ತನ್ನ ಮೇಲ್ಮೈಯನ್ನು ತೋರಿಸಲೇಬೇಕೆ ಎನ್ನುವ ಒತ್ತಡ ಮುಂದೆ ಬರಲು ಇಚ್ಛಿಸುವ ಹೆಣ್ಣು ಎಂಬ ಭಯ. ಈ ಕಾದಂಬರಿಯ ಬಹುಮುಖ್ಯವಾದ ಆಶಯವಾಗಿದೆ ಲಿಂಗ ಸಮಾನತೆ ಬರುವುದಿರಲಿ ಅದರ ಪ್ರಶ್ನೆ ಎತ್ತುವುದು ಕೂಡ ಕೇದವುಂಟು ಮಾಡುವ ಅಂಶಗಳನ್ನುಈ ಕಾದಂಬರಿ ತಿಳಿಸುತ್ತಿದೆ.

## ಕಾದಂಬರಿಯ ಪ್ರಸ್ತುತೀಕರಣ

ಮೊಲೆ ಮುಡಿ ಬಂದಡೆ ಹೆಣ್ಣೆಂಬರು. ಗಡ್ಡ ಮೀಸೆ ಬಂದಡೆ ಗಂಡೆಂಬರು. ನಡುವೆ ಸುಳಿವ ಆತ್ಮನು ಹೆಣ್ಣೂ ಅಲ್ಲ ಗಂಡು ಅಲ್ಲ ಕಾಣಾ! ರಾಮನಾಥ

ಶರೀರದಲ್ಲಿ ಸ್ತ್ರೀ ಲಕ್ಷಣಗಳು ಬೆಳೆಯಲು ಪ್ರಾರಂಭಿಸಿದರೆ, ಆ ವ್ಯಕ್ತಿಯನ್ನು ಹೆಣ್ಣು ಎಂದು ಗುರುತಿಸಲಾಗುತ್ತದೆ. ಪುರುಷ ಲಕ್ಷಣಗಳು, ಉದಾಹರಣೆಗೆ, ಗಡ್ಡ ಮತ್ತು ಮೀಸೆ ಬೆಳೆಯಲು ಪ್ರಾರಂಭಿಸಿದರೆ, ಆ ವ್ಯಕ್ತಿಯನ್ನು ಗಂಡು ಎಂದು ಗುರುತಿಸಲಾಗುತ್ತದೆ. ಆದರೆ, ಶರೀರವನ್ನು ಬಿಟ್ಟರೆ, ನಮ್ಮ ಅಂತರಂಗದ ಆತ್ಮಕ್ಕೆ ಲಿಂಗಭೇದವಿಲ್ಲ. ಆತ್ಮ ಈ ಸಾಲು ಹೇಳಲು ಪ್ರಯತ್ನಿಸುತ್ತದೆ: ನಾವು ಒಬ್ಬರನ್ನೊಬ್ಬರು ಶರೀರದ ಆಧಾರದಲ್ಲಿ ಗುರುತಿಸುತ್ತೇವೆ, ಆದರೆ ನಮ್ಮ ನಿಜ ಸ್ವರೂಪ ಆತ್ಮ, ಅದು ಲಿಂಗಾತೀತವಾಗಿದೆ.

## ಪರಾಮರ್ಶನ ಗ್ರಂಥ

**1.** "ಕವಲು" - ಎಸ್. ಎಲ್. ಭೈರಪ್ಪ, 2010 ಬೆಂಗಳೂರು ಸಾಹಿತ್ಯ ಭಂಡಾರ,
**2.** ಜೇಡರ ದಾಸಿಮಯ್ಯನ ವಚನ ಸಾಹಿತ್ಯ, ಸಮಗ್ರ ವಚನ ಸಾಹಿತ್ಯ
3. ttps://kn.wikipedia.org/wiki/ ಲಿಂಗ ಸಮಾನತೆ ಹಾಗೂ ಮಹಿಳಾ ಸಬಲೀಕರಣ

ಇವರಿಂದ:-

ನವೀನ್ ಕುಮಾರ್ ಸಿ, ಸಹಾಯಕ ಪ್ರಾಧ್ಯಾಪಕರು,

ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿ

ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್